ಹೇಗೆ?', 'ಬರೆವಣಿಗೆ ಎಂದರೇನು?', 'ಅತಿ ಸಣ್ಣಕತೆ ಬರೆಯುವುದು ಹೇಗೆ?', 'ಧೀಮಂತ ಯಾರು? ಚಿಂತಕ ಯಾರು?', 'ವಿಚಾರ ಎಂದರೇನು?' – ಇವು ದಿವಾಕರರು ಕೇಳುವ ಕೆಲ ಪ್ರಶ್ನೆಗಳು.

ಪ್ರಬಂಧ ಪ್ರಕಾರವನ್ನು ಕುರಿತು ದಿವಾಕರರು ಹೇಳುವ ಮಾತುಗಳಲ್ಲಿ ಒಂದು ಎಚ್ಚರಿಕೆಯೂ ಇದೆ: "ಪ್ರಬಂಧದ ಉದ್ದೇಶ ಒಂದು ವಸ್ತುವನ್ನು ಸಂಪೂರ್ಣವಾಗಿ ಬರಿದು ಮಾಡುವುದಲ್ಲ (ಹಾಗೆ ಮಾಡುವುದಾದರೆ ಓದುಗನೂ ಬರಿದಾದಾನು.) ಪ್ರತಿಯಾಗಿ ಆ ವಸ್ತುವಿನ ಬಗ್ಗೆ ಕೆಲವು ಒಳ್ಳೆಯ ಅಂಶಗಳನ್ನು ತಿಳಿಸಿ ಓದುಗರು ತಮ್ಮದೇ ಆದ ರೀತಿಯಲ್ಲಿ ಆ ಪ್ರಬಂಧದ ವಿಚಾರವನ್ನು ಮುಂದುವರಿಸುವಂತೆ ಮಂಡಿಸುವ, ಅದಕ್ಕಾಗಿ ತನ್ನದೇ ಭಾಷೆಯನ್ನು ಸೃಷ್ಟಿಸಿಕೊಳ್ಳುವ ಪ್ರತಿಭೆ ಇರಬೇಕು." (ಪು.112) ದಿವಾಕರರು ಸ್ವತಃ ಈ ಎಚ್ಚರದಲ್ಲಿಯೇ ತಮ್ಮ ಪ್ರಬಂಧಗಳನ್ನು ರಚಿಸಿದ್ದಾರೆ. ಉದಾಹರಣೆಗೆ 'ಪುಣ್ಯಕೋಟಿ, ಪು.ತಿ.ನ., ಗಾಂಧೀಜಿ, ರಾಜಾರಾವ್...' ಎಂಬ ಪ್ರಬಂಧವನ್ನು ನೋಡಬಹುದು. ಗೋವಿನ ಹಾಡು ಎಂದು ಪ್ರಸಿದ್ಧವಾಗಿರುವ ಈ ಕೃತಿಯ ಜನಪ್ರಿಯತೆ, ಅದರ ಇತಿಹಾಸ, ಅದರ ಬೆಳವಣಿಗೆಗಳನ್ನು ಸ್ಥೂಲವಾಗಿ ಪರಿಚಯಿಸಿದ ನಂತರ 'ಕನ್ನಡ ಬಾವುಟ'ದಲ್ಲಿರುವ 24 ಚೌಪದಿಗಳೇ ಹಾಡಿನ ಮೂಲರೂಪ ಎಂಬ ತಮ್ಮ ಅಭಿಪ್ರಾಯವನ್ನು ಹೇಳಿ ಅದರ ವ್ಯಾಖ್ಯಾನಗಳ ವೈವಿಧ್ಯತೆಯ ದೃಷ್ಟಾಂತಗಳನ್ನು ಕೊಡುತ್ತಾರೆ. ಕೆ.ವಿ. ಸುಬ್ಬಣ್ಣನವರು ಹಾಡಿನಲ್ಲಿ ಶೋಕದ ಅನನ್ಯ ಅಭಿವ್ಯಕ್ತಿಯನ್ನು ಕಂಡರು: "ಇಷ್ಟು ಸಂಕ್ಷೇಪದಲ್ಲಿ ಹೀಗೆ ತೀವ್ರವಾಗಿ ಉದ್ಬೋಧಗೊಳ್ಳುವ ಶೋಕವನ್ನು ಇಡೀ ಕನ್ನಡ ಸಾಹಿತ್ಯದ ವ್ಯಾಪ್ತಿಯಲ್ಲೂ ಹೆಚ್ಚು ಕಡೆಗಳಲ್ಲಿ ಕಾಣಲಾರೆವು." ಈ ಮಾತನ್ನು ದಿವಾಕರರು ಪೂರ್ಣವಾಗಿ ಒಪ್ಪುವುದಿಲ್ಲ: "ಹಾಗೆ ನೋಡಿದರೆ ಈ ಗೀತೆಯ ಕೇಂದ್ರದಲ್ಲಿರುವುದು ಶೋಕರಸವಷ್ಟೇ ಅಲ್ಲ." (ಪು. 135). ಅವರಿಗೆ ಈ ಹಾಡನ್ನು ನಿಜವಾದ ಅಹಿಂಸೆಯ ರೂಪಕ ಎಂದು ಗುರುತಿಸಿದ ಕುರ್ತಕೋಟಿಯವರ ಓದು ಹೆಚ್ಚು ಆಪ್ತವೆನಿಸುತ್ತದೆ. "ಈ ಅಹಿಂಸೆಗೂ ಗಾಂಧೀಜಿಯವರು ಕನಸು ಕಂಡ ಅಹಿಂಸೆಗೂ ಸಂಬಂಧವುಂಟೆ?" ಎಂಬ ಅವರ ಪ್ರಶ್ನೆಗೆ ಉತ್ತರ ಗಾಂಧೀಜಿಯವರಿಂದಲೇ ದೊರೆಯುತ್ತದೆ. ರಾಜಾರಾಯರು ಒದಗಿಸಿದ ಈ ಹಾಡಿನ ಅನುವಾದವನ್ನು ಓದಿದ ಗಾಂಧೀಜಿಯವರು "ಇದು ಸಂಪೂರ್ಣವಾಗಿ ನನ್ನನ್ನೇ ಪ್ರತಿನಿಧಿಸುವ ಕವನ" ಎನ್ನುತ್ತಾರೆ. ಇಲ್ಲಿ 'ಸಂಪೂರ್ಣವಾಗಿ' ಎಂಬ ಪದಕ್ಕೆ ವಿಶೇಷ ಅರ್ಥವಿದೆ. ಯಾಕೆಂದರೆ ಈ ಹಾಡಿನಲ್ಲಿ 'ಅಹಿಂಸೆ'ಯಂತೆ ಗಾಂಧೀಜಿಯವರ 'ಸತ್ಯನಿಷ್ಠತೆ'ಯೂ ಎದ್ದು ಕಾಣುತ್ತದೆ. ಇಲ್ಲಿ ಪುಣ್ಯಕೋಟಿ ಒಂದು ಅತ್ಯಂತ ಪ್ರಭಾವೀ ಪ್ರತೀಕವಾಗಿ ರೂಪುಗೊಳ್ಳುತ್ತಾಳಾದ್ದರಿಂದ ವ್ಯಾಖ್ಯಾನಗಳಿಗೆ ಮಿತಿ ಇರಲಾರದು. ಆದರೆ, ಅವುಗಳ ಆಯ್ಕೆಯಲ್ಲಿ ದಿವಾಕರರು ವಿವೇಕ, ಸಂಯಮಗಳನ್ನು ಪಾಲಿಸಿದ್ದಾರೆ.

ಈ ಪ್ರಬಂಧಕ್ಕೆ ಹೋಲಿಸಬಹುದಾದ ಇನ್ನೊಂದು ಪ್ರಬಂಧವೆಂದರೆ 'ಸೂರ್ಯಕಾಂತಿ ಮತ್ತು ವ್ಯಾನ್ ಗೋ'. ವ್ಯಾನ ಗೋನ ಚರಿತ್ರೆ 'ಲಸ್ಟ್ ಫಾರ್ ಲೈಫ್' ಮತ್ತು ಅವನ ಚಪ್ಪಲಿಗಳ ಚಿತ್ರದ ಬಗ್ಗೆ ಅನಂತಮೂರ್ತಿಯವರ ಕವಿತೆಯ ನೆನಪು ಮಸುಕಾಗುತ್ತಿರುವಾಗ ದಿವಾಕರರ ಈ ಪ್ರಬಂಧ ನನ್ನ ಆಸಕ್ತಿಯನ್ನು ಕೆರಳಿಸಿತು. ಈ ಪ್ರಬಂಧದ ಆಕೃತಿ ಪುಣ್ಯಕೋಟಿಯ ಮೇಲಿನ ಪ್ರಬಂಧದ ಆಕೃತಿಗಿಂತ ಭಿನ್ನವಾಗಿದೆ. ದಿವಾಕರರು ಗೌರವಿಸುವ ಲೇಖಕರಲ್ಲಿ ಪಾ.ವೆಂ. ಆಚಾರ್ಯರು ಮುಖ್ಯರು. "ನನಗೆ ಮಾತ್ರ ಗದ್ಯವನ್ನು ಬರೆಯುವಾಗಲೆಲ್ಲ ವಿಷಯ ಪ್ರತಿಪಾದನೆಯ ಬಗ್ಗೆ, ವಾಕ್ಯರಚನೆಯ ಬಗ್ಗೆ ಅವರು ನೀಡಿದ ಸಲಹೆಗಳನ್ನು ನೆನಪು ಮಾಡಿಕೊಳ್ಳದೆ ಗತ್ಯಂತರವೇ ಇಲ್ಲ". (ಪು. 113). "ಪ್ರತಿಯೊಂದು ಪ್ರಬಂಧಕ್ಕೂ ಒಂದೊಂದು ಆಕಾರವಿರಬೇಕು" ಎಂದು ಹೇಳಿದವರೂ ಪಾ.ವೆಂ. ಅವರೇ. ಈ ಪ್ರಬಂಧ ಸೂರ್ಯಕಾಂತಿಯ ವಸ್ತುನಿಷ್ಠ ವರ್ಣನೆಯೊಂದಿಗೆ ಪ್ರಾರಂಭವಾಗಿ, ಪ್ರಸಿದ್ಧವಾದ 'ಸನ್‌ಫ್ಲವರ್' ಪೇಂಟಿಂಗಿನಲ್ಲಿ ವ್ಯಾನ್ ಗೋನ ಪ್ರತಿಭೆಯನ್ನು ಅವನ ಜೀವಿತದಲ್ಲಿ ಯಥಾರ್ಥವಾಗಿ ಗುರುತಿಸಿದವರು ವಿರಳವಾಗಿದ್ದುದರ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿ, ಅವನ ಕಲೆಯ ಬಗ್ಗೆ ಪಿಕಾಸೋನ ಮಾತಿನೊಂದಿಗೆ